ಸಾಕ್ಷಿಯನ್ನು ದಿಃ 17-11-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ. ವಾಯ್ ಡಿ ಟಿ ವಕೀಲರಿಂದಃ(ವಾದಿ ಪರವಾಗಿ)**

ನನ್ನ ಮುಖ್ಯ ವಿಚಾರಣೆಯನ್ನು 1 ನೇ ಪ್ರತಿವಾದಿ ಕರಕಪ್ಪ ಹೇಳಿ ಬರೆಯಿಸಿದ್ದಾನೆ. 1 ನೇ ಪ್ರತಿವಾದಿ ಕರಕಪ್ಪ ಸಂಬಂಧದಲ್ಲಿ ನನ್ನ ಅಣ್ಣನಾಗಬೇಕು. ಕರಕಪ್ಪನ ಮನೆತನದ ಯಾವುದೇ ವ್ಯವಹಾರದಲ್ಲಿ ನಾನು ಹಿರೆತನ ಮಾಡಿಲ್ಲ ಅದೇ ರೀತಿ ನನ್ನ ಮನೆತನದ ಯಾವುದೇ ವ್ಯವಹಾರದ ಹಿರೆತನ ಕರಕಪ್ಪ ಮಾಡಿಲ್ಲ. 1 ನೇ ಪ್ರತಿವಾದಿ ಕರಕಪ್ಪನಿಗೆ 10 ಜನ ಮಕ್ಕಳು ಎಂದರೆ ಸರಿ. ಅವರ ಮನೆತನಕ್ಕೆ ಒಕ್ಕಲುತನ ಮತ್ತು ಕುರಿಸಾಕಾಣಿಕೆ ಇತ್ತು ಎಂದರೆ ಸರಿ. 1 ನೇ ವಾದಿ ಹಾಗೂ ಉಳಿದ ಪ್ರತಿವಾದಿಯರು ಕೂಡಿಯೇ ಕುರಿ ಕಾಯುವುದು ಮತ್ತು ಒಕ್ಕಲುತನ ಮಾಡುವುದು ಮಾಡುತ್ತಿದ್ದರು ಎಂದರೆ ಸರಿ. ಮನೆ ಹಿರಿತನ ಮಾತ್ರ 1 ನೇ ಪ್ರತಿವಾದಿ ಕರಕಪ್ಪ ಮಾಡುತ್ತಿದ್ದ ಎಂದರೆ ಸರಿ. 1 ನೇ ವಾದಿಯ ಮದುವೆಯಾದ ನಂತರ ಆತ ಊಟದ ಪೂರ್ತಿ ಬೇರೆ ವಾಸಿಸತೊಡಗಿದ ಎಂದರೆ ಸರಿ. ಒಟ್ಟು ಕುಟುಂಬದ ಉಳಿದ ವ್ಯವಹಾರ ಕೂಡಿಯೇ ಮುಂದುವರೆಯಿತು ಎಂದರೆ ಸರಿ. 1 ನೇ ವಾದಿ ಬೇರೆ ವಾಸಿಸುತ್ತಿದ್ದರೂ ಸಹ ಮನೆತನದ ಒಕ್ಕಲುತನ, ಕುರಿ ಸಾಕಾಣಿಗೆ ಮತ್ತು ಇತರ ವ್ಯವಹಾರಗಳನ್ನು 1 ನೇ ಪ್ರತಿವಾದಿ ಕರಕಪ್ಪ ನೋಡಿಕೊಳ್ಳುತ್ತಿದ್ದ ಎಂದರೆ ಸರಿ.

ರಿ.ಸ.ನಂ.596, ಪ್ಲಾಟ್ ನಂ.57 ನ್ನು ನಾನು ಮತ್ತು 1 ನೇ ಪ್ರತಿವಾದಿ ಕರಕಪ್ಪ ಕೂಡಿ ಖರಿದಿಸಿದ್ದೇವು ಎಂದರೆ ಸರಿ. ನನ್ನ ಪಾಲಿನ ಅರ್ಧ ಆಸ್ತಿಯನ್ನು ಕರಕಪ್ಪ ನನಗೆ ಹಣ ನೀಡಿ ತನ್ನ ಮಗಳಾದ 2 ನೇ ವಾದಿ ಗಿರಿಜವ್ವನಿಗೆ ಕೊಡಿಸಿದನು. ನಾನು 2 ನೇ ವಾದಿ ಗಿರಿಜವ್ವನಿಗೆ ಮಾರಾಟ ಮಾಡಿದ ಆಸ್ತಿಯ ಖರೀದಿ ರಖಂನ್ನು ಗಿರಿಜವ್ವಳ ಗಂಡ ಭೀಮಪ್ಪ ನನಗೆ ನೀಡಿದ್ದಾರೆ. ಭೀಮಪ್ಪ ನನಗೆ ರೂ.33 ಸಾವಿರ ಹಣ ನೀಡಿದ ನಂತರ ನಾನು ಸದರಿ ಆಸ್ತಿಯನ್ನು 2 ನೇ ವಾದಿ ಗಿರಿಜವ್ವಳ ಹೆಸರಿಗೆ ಖರೀದಿ ಹಾಕಿಕೊಟ್ಟಿದ್ದೇನೆ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಷಯಗಳನ್ನು ಬರೆಯಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.